
# ಅಪ್ಪನ ಸ್ಕೂಟರ್



ನಮ್ಮ ಅಪ್ಪನ
ಸ್ಕೂಟರ್
ಯಾವಾಗ್ ನೋಡ್ಲಿ
ಪಂಕ್ಚರ್

ಅಮ್ಮನು ಕೂತರೆ
ಅಲ್ಲಾಡುವುದು
ಮಾಮನು ಕೂತರೆ
ಮರುಮಾತಾಡದು

ಎಷ್ಟೆ ಹಾಕಲಿ
ಪೆಟ್ರೋಲು
ತುಂಬುವುದಿಲ್ಲ
ಆದರೊಡಲು

ನೀಡುವುದಿಲ್ಲ
ಮೈಲೇಜು
ಮನೆಯನು ಬಿಟ್ರೆ
ಗ್ಯಾರೇಜು

ಗುಂಡಿಯ ಒತ್ತಲು
ಗುರುಗುಟ್ಟುವುದು
ಕಿಕ್ಕನು ಒದೆಯಲು
ಕಿರುಗುಟ್ಟುವುದು

ಮಕ್ಕಳ ಶಾಲೆಗೆ
ಬಿಡಲಿದು ಬೇಕು

ತರಕಾರಿ ಸಾಮಾನು
ತರಲಿದು ಬೇಕು

ಚಳಿ–ಮಳೆ–ಗಾಳಿಗೆ
ಚಕಾರವೆತ್ತದು
ಕಾಯಿಲೆ ಮುಪ್ಪಿಗೆ
ವಿಕಾರಗೊಳದು

ಕೋಪಕೆ ಮುದುರದು
ಬೈಗುಳಕೆ ಹೆದರದು
ಉಕ್ಕಿನ ಮೈಯಿನ
ಅಪ್ಪನ ಮುದ್ದಿದು

ನಮ್ಮ ಅಪ್ಪನ
ಸ್ಕೂಟರ್
ನಮ್ಮೆಲ್ಲರ ನೆಚ್ಚಿನ
ಮೋಟರ್

● ನಿತ್ಯಾನಂದ ಸುಂಡವಾಳು